## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: 2018-19ನೇ ಸಾಲಿನ ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಒಕ್ಕೂಟ ನಿಯಮಿತ, ರಾಯಚೂರು ಸಂಸ್ಥೆಯು ಇಲಾಖಾ ಕಾರ್ಯಕ್ರಮಗಳಡಿ ವಿತರಿಸಿದ ನೆಲಗಡಲೆ ಬಿತ್ತನೆ ಬೀಜದ ದರದ ವ್ಯತ್ಯಾಸದ ಹಣವನ್ನು ಸಂಸ್ಥೆಗೆ ಬಿಡುಗಡೆ ಮಾಡುವ ಬಗ್ಗೆ.**

ಓದಲಾಗಿದೆ: ಕೃಷಿ ಆಯುಕ್ತರವರ ಪ್ರಸ್ತಾವನೆ ಸಂಖ್ಯೆ:ಎಸ್‌ಎಫ್‌ಎಸ್-5/ರಿಬೀವಿ/ವೆಚ್ಚ/2018-19 ದಿನಾಂಕ 22.11.2018.

**ಪ್ರಸ್ತಾವನೆ:**

ಮೇಲೆ ಓದಲಾದ ಕೃಷಿ ಆಯುಕ್ತರವರ ಪ್ರಸ್ತಾವನೆಯಲ್ಲಿ, 2018-19ನೇ ಸಾಲಿನ ಹಿಂಗಾರು / ಬೇಸಿಗೆ ಹಂಗಾಮಿನಲ್ಲಿ ಯಾದಗಿರಿಯಲ್ಲಿ ಉತ್ತಮ ಮಳೆಯಾದ ಕಾರಣ ನೆಲಗಡಲೆ ಬಿತ್ತನೆ ಬೀಜಗಳಿಗೆ ಹಠಾತನೆ ಹೆಚ್ಚಿನ ಬೇಡಿಕೆ ಬಂದ ಹಿನ್ನಲೆಯಲ್ಲಿ ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜಗಳನ್ನು ಪೂರೈಸುವ ದೃಷ್ಟಿಯಿಂದ ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಒಕ್ಕೂಟ ನಿಯಮಿತ, ರಾಯಚೂರು ಸಂಸ್ಥೆಗೆ ನೆಲಗಡಲೆ TMV-2 ನಿಜ ಚೀಟಿ ಬಿತ್ತನೆ ಬೀಜಗಳನ್ನು ರೂ.8000/- ಪ್ರತಿ ಕ್ವಿಂಟಾಲಿನಂತೆ ಸರಬರಾಜು ಮಾಡುವಂತೆ ತಿಳಿಸಲಾಗಿದೆ. ಮತ್ತೊಮ್ಮೆ ಟೆಂಡರ್ ಕರೆದು ರೂ.8800/- ಪ್ರತಿ ಕ್ವಿಂಟಾಲಿನಂತೆ ದರ ನಿಗದಿಪಡಿಸಲಾಗಿರುತ್ತದೆ. ಎರಡನೇ ಬಾರಿಯ ಟೆಂಡರಿನಲ್ಲಿ ನಿಗದಿಯಾದ ದರ (ರೂ.8800/- ಪ್ರತಿ ಕ್ವಿಂಟಾಲಿನಂತೆ) ಹಾಗೂ ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಒಕ್ಕೂಟ ನಿಯಮಿತ, ರಾಯಚೂರು ಸಂಸ್ಥೆಯು ಸರಬರಾಜು ಮಾಡಿರುವ ದರ (ರೂ.8000/- ಪ್ರತಿ ಕ್ವಿಂಟಾಲಿನಂತೆ) ಗಳಿಲ್ಲಿ ಉಂಟಾಗಿರುವ ವ್ಯತ್ಯಾಸದ ದರ ರೂ.800/- ಪ್ರತಿ ಕ್ವಿಂಟಾಲಿನಂತೆ ಒಟ್ಟು 9640 ಕ್ವಿಂಟಾಲಿಗೆ ರೂ.77,12,000/- ಗಳನ್ನು ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ ಯೋಜನೆಯಡಿ ಬಿಡುಗಡೆಯಾಗುವ ಅನುದಾನದಲ್ಲಿ ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಒಕ್ಕೂಟ ನಿಯಮಿತ, ರಾಯಚೂರು ಸಂಸ್ಥೆಗೆ ಲೆಕ್ಕ ಶೀರ್ಷಿಕೆ: 2401-00-103-0-15 ಉಪ ಶೀರ್ಷಿಕೆ-ಸಾಮಾನ್ಯ 106 ರಡಿ ಭರಿಸಲು ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 137 ಕೃಇಕ 2018, ಬೆಂಗಳೂರು, ದಿನಾಂಕ 01-01-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2018-19ನೇ ಸಾಲಿನಲ್ಲಿ ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ ಯೋಜನೆಯಡಿ ತ್ರೈಮಾಸಿಕದಲ್ಲಿ ಬಿಡುಗಡೆಯಾಗುವ ಅನುದಾನದಲ್ಲಿ ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಒಕ್ಕೂಟ ನಿಯಮಿತ, ರಾಯಚೂರು ಸಂಸ್ಥೆಗೆ ರೂ.77,12,000/- (ಎಪ್ಪತ್ತೇಳು ಲಕ್ಷ ಹನ್ನೆರಡು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಲೆಕ್ಕ ಶೀರ್ಷಿಕೆ: 2401-00-103-0-15 ಉಪ ಶೀರ್ಷಿಕೆ-ಸಾಮಾನ್ಯ 106 ರಡಿ ಲಭ್ಯವಿರುವ ಸಹಾಯಾನುದಾನದ ಮಿತಿಯಲ್ಲಿಯೇ ನಿಯಮಾನುಸಾರ ಭರಿಸಲು ಅನುಮೋದನೆ ನೀಡಿ ಆದೇಶಿಸಿದೆ.

..2)

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಕೃಇ 103 ಆಂಆಸ 2018 ದಿನಾಂಕ 14.12.2018 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

B S Nagarathnamma

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

ಗೆ:

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ), ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2) ಪ್ರಧಾನ ಮಹಾಲೇಖಪಾಲರು (ಇ&ಆರ್ಎಸ್ಎ), ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3) ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4) ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು
5) ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು
6) ವ್ಯವಸ್ಥಾಪಕ ನಿರ್ದೇಶಕರು, ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಒಕ್ಕೂಟ, ರಾಯಚೂರು
7) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
8) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು
9) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು
10) ಸರ್ಕಾರದ ಜಂಟಿ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ
11) ಸರ್ಕಾರದ ಉಪ ಕಾರ್ಯದರ್ಶಿ-1 & 2, ಕೃಷಿ ಇಲಾಖೆ ಇವರ ಆಪ್ತ ಶಾಖೆ, ಬೆಂಗಳೂರು
12) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.